# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ -2
## (ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಬುಧವಾರ, ದಿನಾಂಕ: 12ನೇ ಜುಲೈ, 2017**

*******

**ಸಂಖ್ಯೆ:26**

ಕಾರವಾರ ನೌಕಾನೆಲೆಗೆ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳು ದಿನಾಂಕ: 18.07.2017 ರಿಂದ 20.07.2017ರ ಭೇಟಿ ಬಗ್ಗೆ ಶ್ರೀ ವಿ.ಕೆ.ಜನಾರ್ಧನ್, ಕ್ಯಾಪ್ಟನ್, ಆಫೀಸರ್ ಇನ್‌ಚಾರ್ಜ್, ನಾವಲ್ ಡಿಟ್ಯಾಚ್‌ಮೆಂಟ್, ರವರು ತಮ್ಮ ಪತ್ರದಲ್ಲಿ ಪ್ರಸಕ್ತ ಸಮುದ್ರದಲ್ಲಿ ಪ್ರತಿಕೂಲ ವಾತಾವರಣವಿರುವುದರಿಂದ, ಯುದ್ಧನೌಕೆಗಳಿಗೆ ಭೇಟಿ ನೀಡಲು ಸೂಕ್ತ ಕಾಲವಾಗಿರುವುದಿಲ್ಲ. ಆದುದರಿಂದ, ಈ ಭೇಟಿಯ ಸಮಯವನ್ನು ಡಿಸೆಂಬರ್ 2017ರ ಬೆಳಗಾವಿಯಲ್ಲಿ ಅಧಿವೇಶನ ನಡೆಯುವ ಸಮಯದಲ್ಲಿ ಪುನರ್ ನಿಗಧಿಪಡಿಸಬೇಕೆಂದು ಕೋರಿರುತ್ತಾರೆ.

ಆದುದರಿಂದ, ದಿನಾಂಕ:18.07.2017 ರಿಂದ 20.07.2017 ರವರೆಗೆ ನಿಗಧಿಪಡಿಸಲಾಗಿದ್ದ ಕಾರವಾರ ನೌಕಾನೆಲೆಗೆ ಭೇಟಿ ನೀಡುವ ಪ್ರವಾಸ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿರುತ್ತದೆಂದು ಹಾಗೂ ಮುಂದಿನ ದಿನಾಂಕವನ್ನು ತದನಂತರ ತಿಳಿಸಲಾಗುವುದೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿರುತ್ತದೆ.

ಶ್ರೀನಿವಾಸ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ